## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.-7320/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 22/05/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶಿರ್ವಾ ಗ್ರಾಮದ ಸರ್ವೆ ನಂ. 106/4ಎ2ಬಿ1 ರಲ್ಲಿ ಕಟ್ಟಡ ಮಾಲೀಕರು 0.07 ಎಕರೆ ಸ್ಥಳವನ್ನು ಒತ್ತುವರಿ ಮಾಡಿದ್ದು ಈ ಬಗ್ಗೆ ಕಾನೂನು ರೀತ್ಯಾ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಜೆರೊಮ್ ಕ್ಯಾಸ್ತಲಿನೊ ಬಿನ್ ಲೇಟ್ ಪಾಸ್ಕಲ್ ಕ್ಯಾಸ್ತಲಿನೊ, ಬಿ.ಸಿ.ರೋಡ್ ಮನೆ, ಬಂಟಕಲ್, ಶಿರ್ವ ಗ್ರಾಮ, ಉಡುಪಿ ತಾಲ್ಲೂಕು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಪಿ.ಸುಂದರ ಪ್ರಭು, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ಜಿಲ್ಲೆ ಮತ್ತು, (2) ಶ್ರೀ ಹಾಸನಾಭ ಶೇಖ, ಅಧ್ಯಕ್ಷರು, ಶಿರ್ವ ಗ್ರಾಮ ಪಂಚಾಯತ್, ಉಡುಪಿ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಪಂಚಾಯತ್ ರಸ್ತೆಯನ್ನು ಅತಿಕ್ರಮಿಸಿ ಕಟ್ಟಡ ಕಟ್ಟಲು ಪರವಾನಿಗೆ ನೀಡಿದ್ದರ ಬಗ್ಗೆ ದೂರು ಸಲ್ಲಿಸಲಾಗಿದೆ. ಶಿರ್ವಾ ಗ್ರಾಮದ ಸರ್ವೆ ನಂ. 106ರ ಬಿ.ಸಿ.ರಸ್ತೆಯನ್ನು ಶ್ರೀ ಮಠದವರು (ಸೋದೆ ಮಠ) ಶಿರ್ವಾ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಿದ್ದಾರೆ. ರಸ್ತೆಯ ಜಾಗವನ್ನು ಅತಿಕ್ರಮಿಸಿ ಕಟ್ಟಡವನ್ನು ಕಟ್ಟಲು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಪರವಾನಿಗೆಯನ್ನು ನೀಡಿರುತ್ತಾರೆ. ರಸ್ತೆಯನ್ನು ಸಾರ್ವಜನಿಕರಿಗೆ ಬಿಡಿಸಿ ಕೊಡಬೇಕೆಂದು ಕೋರಲಾಗಿದೆ.

ದೂರಿನೊಂದಿಗೆ ಎದುರುದಾರರ ಕಛೇರಿಗೆ ಹಾಗೂ ಇತರೆ ಅಧಿಕಾರಿಗಳಿಗೆ ಕ್ರಮ ವಹಿಸಲು ಕೋರಿ ಸಲ್ಲಿಸಿದ ಅರ್ಜಿ ಪ್ರತಿ, ರಸ್ತೆಗಳನ್ನು ದುರಸ್ತಿ ಮಾಡಲು ನಿರ್ಣಯಿಸಿದ ಪಂಚಾಯತಿ ಸಾಮಾನ್ಯ ಸಭೆ ನಡವಳಿ ಪ್ರತಿ, ಶ್ರೀ ಮಠದವರು ರಸ್ತೆಯನ್ನು ಪಂಚಾಯ್ತಿಗೆ ಹಸ್ತಾಂತರಿಸಿದ ಪತ್ರದ ಪ್ರತಿ, ಕಟ್ಟಡ ಕಟ್ಟಲು ನೀಡಿರುವ

ಪರವಾನಗಿ ಪ್ರತಿ, ಕಟ್ಟಡದ ಅಂದಾಜು ವೆಚ್ಚದ ಪ್ರತಿ, ಆರ್.ಟಿ.ಸಿ., ಪ್ರತಿ, ಕಟ್ಟಡ ಅನುಮೋದಿತ ನಕ್ಷೆ ಪ್ರತಿ, ಭೂಪರಿವರ್ತತನಾ ಆದೇಶದ ಪ್ರತಿ, ಭೂಪರಿವರ್ತನೆ ನೇತ್ರ ನಕಾಶೆ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

3. ತನಿಖಾ ಅವಧಿಯಲ್ಲಿ ಓ.ಎಸ್. 51/2007 ರಲ್ಲಿಯ ದಿನಾಂಕ: 31/08/2013ರ ತೀರ್ಪಿನ ಪ್ರತಿ ಸಂಗ್ರಹಿಸಲಾಗಿರುತ್ತದೆ. ಸದರಿ ದಾವೆಯನ್ನು ಪ್ರಕರಣದ ಪಿರ್ಯಾದುದಾರರು ರಸ್ತೆ ಒತ್ತುವರಿಗೆ ಸಂಬಂಧಪಟ್ಟಂತೆ ದೂರಿನಲ್ಲಿ ಆರೋಪಿಸಿರುವ ಕಟ್ಟಡದ ಮಾಲೀಕರ ವಿರುದ್ಧ ಸಲ್ಲಿಸಿದ್ದು ಶಾಶ್ವತ ನಿಷೇದಾಜ್ಞೆ ಕೋರಿ ಸಲ್ಲಿಸಿದ ದಾವೆಯು ವಜಾ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ತೀರ್ಪಿನಲ್ಲಿ ಕಟ್ಟಡದ ಮಾಲೀಕರು ರಸ್ತೆಯನ್ನು ಒತ್ತುವರಿ ಮಾಡಿ ಕಾಂಪೌಂಡ್ ಕಟ್ಟುತ್ತಿದ್ದ ಬಗ್ಗೆ ವಾದಿಗಳು ರುಜುವಾತು ಪಡಿಸಿಲ್ಲವೆಂದು, 40 ಲಿಂಕ್ಸ್ ರಸ್ತೆ ಇರುವುದನ್ನು ಹಾಗೂ 30–32 ವರ್ಷಗಳಿಂದ ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದರೆಂದು ವಆದಿಯು ರುಜುವಾತು ಪಡಿಸಿಲ್ಲವೆಂದು ದಾವೆಯನ್ನು ವಜಾ ಮಾಡಿ ಆದೇಶಿಸಲಾಗಿರುತ್ತದೆ. ಹಾಗೂ ಉಭಯ ಪಕ್ಷಕಾರರ ಮಧ್ಯೆ ಓ.ಎಸ್. 137/2005 ದಾವೆ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದ ಬಗ್ಗೆ ತೀರ್ಪಿನಲ್ಲಿ ನಮೂದಿಸಿರುತ್ತಾರೆ.

4. 1ನೇ ಎದುರುದಾರರ ಆಕ್ಷೇಪಣೆ:–

ಶ್ರೀ ರೋನಾಲ್ಡ್ ಕ್ವಾಡ್ರಸ್ ರವರು ಅವರ ಸ್ವಂತ ಹೆಸರಿನಲ್ಲಿರುವ ಸ್ಥಳ ಸರ್ವೆ ನಂ. 106/4ಎ2ಬಿ1 ರ ಸ್ಥಳದಲ್ಲಿ ವಾಸ್ತವ್ಯದ ಮನೆ ರಚಿಸಲು ದಾಖಲೆ ಪತ್ರಗಳೊಂದಿಗೆ ದಿನಾಂಕ: 17/07/2014 ರಂದು ಅರ್ಜಿ ನೀಡಿರುತ್ತಾರೆ. ಪಿರ್ಯಾದುದಾರರು ದೂರು ಅರ್ಜಿಯನ್ನು ನೀಡಿದ್ದು ಸಾಮಾನ್ಯ ಸಭೆಯಲ್ಲಿ ಪರಿಶೀಲಿಸಲಾಗಿದೆ. ಸೂಕ್ತ ದಾಖಲೆ ನೀಡಿದಲ್ಲಿ ಸದರಿಯವರಿಗೆ ನೀಡಲಾದ ಕಟ್ಟಡ ಪರವಾನಿಗೆಯನ್ನು ತಡೆಹಿಡಿಯುವುದಾಗಿ ಗ್ರಾಮ ಪಂಚಾಯತಿಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಂಡಿರುತ್ತದೆ.

5. 2ನೇ ಎದುರುದಾರರ ಆಕ್ಷೇಪಣೆ:–

ಶ್ರೀ ರೋನಾಲ್ಡ್ ಕ್ವಾಡ್ರ್ ರವರು ದಾಖಲೆ ಪತ್ರಗಳೊಂದಿಗೆ ಪರವಾನಗಿ ಅರ್ಜಿ ನೀಡಿರುತ್ತಾರೆ. ದಿನಾಂಕ: 26/07/2014ರ ಸಾಮಾನ್ಯ ಸಭೆಯ ಸರ್ವಾನುಮತದ ನಿರ್ಣಯದಂತೆ ನೀಡಲಾಗಿದೆ. ಮನೆ ರಚಿಸುವ ಸ್ಥಳಕ್ಕೆ ಗಡಿ ಗುರುತು ಸಮರ್ಪಕವಿಲ್ಲ ಅಲ್ಲದೆ ಅಳತೆ ಮಾಡಿಸಿ ಮನೆ ರಚನೆ ಮಾಡಬೇಕೆಂದು ಪಿರ್ಯಾದುದಾರರು ದೂರು ಅರ್ಜಿ ನೀಡಿರುತ್ತಾರೆ. ಈ ಬಗ್ಗೆ ಸೂಕ್ತ ದಾಖಲೆ ನೀಡಿದಲ್ಲಿ ಸದರಿಯವರಿಗೆ ನೀಡಲಾದ ಕಟ್ಟಡ ಪರವಾನಿಗೆಯನ್ನು ತಡೆಹಿಡಿಯುವುದಾಗಿ ಗ್ರಾಮ ಪಂಚಾಯತಿಯಲ್ಲಿ ಸವಾನುಮತದಿಂದ ನಿರ್ಣಯ ಕೈಗೊಂಡಿರುತ್ತದೆ.

6. ದೂರುದಾರರ ಪ್ರತ್ಯುತ್ತರ:–

ಪಿರ್ಯಾದುದಾರರು ಪ್ರತ್ಯುತ್ತರ ಸಲ್ಲಿಸಿ ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

7. ತನಿಖಾಧಿಕಾರಿಗಳ ವರದಿ:

ದೂರು ಅರ್ಜಿಯ ವಿಚಾರಣೆಗೆ ಸಂಬಂಧಿಸಿದಂತೆ ಶಿರ್ವ ಗ್ರಾಮದ ಬಿ.ಸಿ. ರೋಡ್ ಬಂಟಕಲ್ ಜಂಕ್ಷನ್ ಎಂಬಲ್ಲಿಗೆ ಭೇಟಿ ನೀಡಿದ್ದು, ಜಾಗ ಪರಿಶೀಲನೆಯ ಸಮಯ ಸ್ಥಳದಲ್ಲಿ ಅರ್ಜಿದಾರರು ಹಾಜರಿರುತ್ತಾರೆ. ಸ್ಥಳ ಪರಿಶೀಲನೆಯ ಸಮಯ ಶ್ರೀ ಜನಾರ್ಧನ ಆಚಾರಿ ರವರ ಕಾಂಪೌಂಡ್ ಗೋಡೆಗೆ ತಾಗಿಕೊಂಡು ಸುಮಾರು 8 ಅಡಿ ಅಗಲದ ಮಣ್ಣು ರಸ್ತೆ ಹಾದೂ ಹೋಗಿರುವುದು ಕಂಡುಬಂದಿರುತ್ತದೆ. ಸದರಿ ರಸ್ತೆಯು ತಮ್ಮ ಹಾಗೂ ಇತರರ ಮನೆಗಳಿಗೆ ಸಾರ್ವಜನಿಕರು ಹೋಗಿ ಬರುವ ರಸ್ತೆ ಜಾಗವಾಗಿದ್ದು, ಸದರಿ ರಸ್ತೆ ಜಾಗವು ಶ್ರೀ ಜನಾರ್ಧನ ಆಚಾರಿ ಯವರಿಗೆ ಸೇರಿದ್ದ ಖಾತೆ ಜಾಗ ಎಂಬುವುದಾಗಿ ದಿನಾಂಕ: 02/01/2015 ರಂದು ಕಂದಾಯ ಇಲಾಖೆಯ ತಾಲ್ಲೂಕು ಭೂಮಾಪಕರಾದ ಶ್ರೀ ಎಸ್.ಧನಶೇಖರ್ ರವರು ಅಳತೆ ಮಾಡಿದ್ದ ಸಮಯ ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ.

ರೋನಾಲ್ಡ್ ಕ್ವಾಡ್ರಸ್ ರವರು ಸರ್ವೆ ನಂ. 106/4ಎ2ಬಿ1 ರಲ್ಲಿ ವಾಣಿಜ್ಯ ಮತ್ತು ವಸತಿ ಕಟ್ಟಡವನ್ನು ಕಟ್ಟಲು ಪಂಚಾಯತ್‌ನಿಂದ ಪರವಾನಿಗೆ ಪಡೆದುಕೊಂಡಿರುತ್ತಾರೆ. ಸಾರ್ವಜನಿಕರು ಆಕ್ಷೇಪಿಸಿದ್ದರಿಂದ ಕಾಮಗಾರಿ ನಿಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ವರದಿಯನ್ನು ಪಡೆದುಕೊಂಡಿದ್ದು ಕಟ್ಟಡ ಕಟ್ಟಲು ಪರವಾನಿಗೆ ನೀಡಿದ್ದಾಗಿಯೂ, ಸದರಿಯವರು ಕಟ್ಟಡ ನಿರ್ಮಿಸಿದ ಸ್ಥಳ ಪರಿಶೀಲನೆ ಮಾಡಿರುವುದಾಗಿ ಹಾಗೂ ಸದರಿ ಸ್ಥಳ ಭೂ ಪರಿವರ್ತನೆಗೊಂಡಿದ್ದಾಗಿಯೂ ತಿಳಿಸಿರುತ್ತಾರೆ. ಶ್ರೀ ಸೋದೆ ಮಠದವರು ಸರ್ವೆ ನಂ. 106 ರಲ್ಲಿನ ರಸ್ತೆ ಜಾಗವನ್ನು ಪಂಚಾಯತ್‌ಗೆ ಹಸ್ತಾಂತರ ಮಾಡಿದ ಬಗ್ಗೆ ಪಂಚಾಯತ್‌ಗೆ ಮಾಹಿತಿ ಇರುವುದಿಲ್ಲವಾಗಿಯೂ ವರದಿಯಲ್ಲಿ ನಮೂದಿಸಿರುತ್ತಾರೆ.

ಕಂದಾಯ ನಿರೀಕ್ಷಕರು, ಕಾಪು ಇವರಿಂದ ತನಿಖಾ ವರದಿ ಪಡೆಯಲಾಗಿ ಸರ್ವೆ ನಂ. 106/4ಎ2ಬಿ1 ರಲ್ಲಿ 0.10 ಎಕರೆ ಜಮೀನು ಈಗಾಗಲೇಭೂ ಪರಿವರ್ತನೆ ಆಗಿರುವುದಾಗಿ ನಮೂದಿಸಿರುತ್ತಾರೆ.

ತಹಶೀಲ್ದಾರ್‌ರು ತಮ್ಮ ವರದಿಯಲ್ಲಿ ಸರ್ವೆ ನಂ. 106/4ಎ2ಬಿ, 106/4ಎ2ಬಿ1, 106/4ಎ1 ಮತ್ತು ಸರ್ವೆ ನಂ. 16 ರಲ್ಲಿನ ಜಮೀನುಗಳನ್ನು ತಾಲ್ಲೂಕು ಮೋಜಣಿದಾರರು ಅಳತೆ ಮಾಡಿರುತ್ತಾರೆ. ಎಲ್ಲಿಯೂ ಕೂಡಾ 13.6 ಮೀಟರ್ ರಸ್ತೆ ಇರುವುದಿಲ್ಲ. ಕಾರಣ ಭೂ ಸ್ಥಿತಿಗೆ ಮತ್ತು ಮೂಲ ಎಫ್.ಎಂ.ಬಿ. ನಕ್ಷೆಗೆ ತಾಳೆ ಇಡಲಾಗಿದೆ ಎಂದು ಜಮೀನಿನ ನಕ್ಷೆ ಹಾಗೂ

ವರದಿಯನ್ನು ಸಲ್ಲಿಸಿರುತ್ತಾರೆ. ಶ್ರೀ ರೊನಾಲ್ಡ್ ಕ್ವಾಡ್ರಸ್ ರವರ ಹೆಸರಿನಲ್ಲಿ ಶಿರ್ವ ಗ್ರಾಮದ ಸರ್ವೆ ನಂ. 106/4ಎ2ಬಿ1 ರಲ್ಲಿ 0.10 ಎಕರೆ ಜಾಗವಿದ್ದು, ಸದರಿ ಜಾಗ ಭೂ ಪರಿವರ್ತನೆ ಆಗಿರುವುದು ಕಂಡುಬಂದಿರುತ್ತದೆ. "ಶಿರ್ವ ಗ್ರಾಮದ ಸರ್ವೆ ನಂ. 106/4ಎ2ಬಿ1ರ ಹಿಡುವಳಿದಾರರಾದ ರೋನಲ್ಡ್ ಕ್ವಾಡ್ರಸ್ ರವರು 0.07 ಎಕರೆ ಸ್ಥಳವನ್ನು ಒತ್ತುವರಿ ಮಾಡಿಕೊಂಡಿದ್ದು, ಸದರಿ ವಿಸ್ತೀರ್ಣಕ್ಕೆ ಇವರಿಗೆ ಪಹಣಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ.

ರೊನಾಲ್ಡ್ ಕ್ವಾಡ್ರಸ್ ರವರು ಕಟ್ಟಡ ನಿರ್ಮಿಸಲು ಪಂಚಾಯತ್‌ನಿಂದ ಪರವಾನಿಗೆ ಪಡೆದುಕೊಂಡ ಶಿರ್ವ ಗ್ರಾಮದ ಸರ್ವೆ ನಂ. 106/4ಎ2ಬಿ1 ರಲ್ಲಿನ ಸ್ಥಳದಲ್ಲಿ 0.7 ಎಕರೆ ಸ್ಥಳವನ್ನು ಒತ್ತುವರಿ ಮಾಡಿಕೊಂಡಿರುವುದು ಕಂಡುಬಂದಿರುವುದರಿಂದ ಪಂಚಾಯತ್‌ನ ಪಿ.ಡಿ.ಓ. ರವರು ಸ್ಥಳ ಪರಿಶೀಲನೆ ಮಾಡದೇ ಪರವಾನಿಗೆ ನೀಡಿರುವುದು ಕಂಡುಬಂದಿರುತ್ತದೆ. "ಒತ್ತುವರಿ ಮಾಡಿಕೊಂಡಿದ್ದ 0.07 ಎಕರೆ ಸ್ಥಳವನ್ನು ತೆರವುಗೊಳಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಈ ತನಕ ಯಾವುದೇ ಕ್ರಮ ಜರುಗಿಸದೇ ಇರುವುದು" ಕಂಡುಬಂದಿರುತ್ತದೆ.

ಅಳತೆ ಸಮಯ ಶಿರ್ವ ಗ್ರಾಮದ ಸರ್ವೆ ನಂ. 106/8ರ ಜಮೀನಿನ ಭೂ ಸ್ಥಿತಿಯಂತೆ ಇಲ್ಲಿ 5.6 ಮೀಟರ್ ಮಾತ್ರ ಲಭ್ಯವಿದ್ದು, ಹಾಲಿ ಜಮೀನಿನಲ್ಲಿಯೂ ಕೂಡಾ ಎಲ್ಲಾ ಕಡೆ ರಸ್ತೆ ಬಗ್ಗೆ ವಿಂಗಡಿಸಿದ ಸ್ಥಳಗಳು 5.6 ಅಥವಾ 4.0 ಮೀಟರ್ ಮಾತ್ರ ಲಭ್ಯವಿದ್ದು, ಎಲ್ಲಿಯೂ ಕೂಡ 13.6 ಮೀಟರ್ ರಸ್ತೆ ಇಲ್ಲದೇ ಇರುವುದು ಉಡುಪಿ ತಹಶೀಲ್ದಾರರ ವರದಿಯಿಂದ ಕಂಡುಬಂದಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

ತನಿಖಾ ವರದಿಯೊಂದಿಗೆ ತಾಲ್ಲೂಕು ಭೂಮಾಪಕರು, ಉಡುಪಿ ರವರು ತಯಾರಿಸಿ ಸಲ್ಲಿಸಿದ ಕಚ್ಚಾ ನಕ್ಷೆಯ ಪ್ರತಿಯನ್ನು ಸಲ್ಲಿಸಿದ್ದು ಸದರಿ ನಕ್ಷೆಯಲ್ಲಿ ಸರ್ವೆ ನಂ. 106/4ಎ2ಬಿ1 ಜಮೀನಿನಲ್ಲಿ 0.07 ಎಕರೆ ಒತ್ತುವರಿ ಜಾಗವನ್ನು ಸ್ಪಷ್ಟವಾಗಿ ನಮೂದಿಸಿರುತ್ತಾರೆ.

8. ತನಿಖಾ ಅವಧಿಯಲ್ಲಿ ಕಂಡುಬಂದ ಅಂಶಗಳು:

(1) ಶಿರ್ವ ಗ್ರಾಮದ ರೊನಾಲ್ಡ್ ಕ್ವಾಡ್ರಸ್ ರವರು ತನಗೆ ಸೇರಿದ ಜಮೀನು ಸರ್ವೆ ನಂ. 106/4ಎ2ಬಿ1 ರಲ್ಲಿ ವಾಸ್ತವ್ಯ ಆರ್.ಸಿ.ಸಿ. ಕಟ್ಟಡ ಮತ್ತು 3 ವಾಣಿಜ್ಯ ಕಟ್ಟಡ ಕಟ್ಟಲು ಪರವಾನಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

(2) ದಿನಾಂಕ: 04/09/2014 ರಂದು ಪರವಾನಗಿ ನಂ. 63/2014-15ನ್ನು ದಿನಾಂಕ: 30/08/2014 ರಿಂದ 29/08/2015 ರವರೆಗೆ ನಿರ್ಮಾಣ ಮಾಡಲು ನೀಡಲಾಗಿರುತ್ತದೆ.

(3) ಪರವಾನಗಿ ನೀಡಿರುವ ಅವಧಿಯಲ್ಲಿ 2ನೇ ಎದುರುದಾರರು ಅಧ್ಯಕ್ಷರಿರುವುದಾಗಿ ಹಾಲಿ ಮಾಜಿ ಅಧ್ಯಕ್ಷರಿರುವುದಾಗಿ ಕಂಡುಬಂದಿರುತ್ತದೆ.

(4) 1ನೇ ಎದುರುದಾರರು ಪರವಾನಗಿ ನೀಡುವ ಅವಧಿಯಲ್ಲಿ ಹಾಗೂ 0.07 ಎಕರೆ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿದ ಅವಧಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ಅಧಿಕಾರಿಗಳಿರುವುದು ಕಂಡುಬಂದಿರುತ್ತದೆ.

(5) ಓ.ಎಸ್. 51/2007 ತೀರ್ಮ ಸರ್ವೆ ನಂ. 106/4ಎ 2ಎ1ಪಿ 16ರ ಜಮೀನಿನಲ್ಲಿರುವ ರಸ್ತೆಗೆ ಸಂಬಂಧಪಟ್ಟಿದ್ದು ದೂರಿನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟಿರುವುದಿಲ್ಲ.

(6) ತನಿಖಾ ವರದಿಯಿಂದ ಹಾಗೂ ಭೂಮಾಪಕರು ಸಲ್ಲಿಸಿರುವ ಕಚ್ಛ ನಕ್ಷೆಯಿಂದ ಕಟ್ಟಡ ಮಾಲೀಕರು ಸರ್ವೆ ನಂ. 106/4ಎ 2ಬಿ1 ರಲ್ಲಿ 0.07 ಎಕರೆ ಸ್ಥಳವನ್ನು ಒತ್ತುವರಿ ಮಾಡಿ ನಿರ್ಮಿಸಿದ್ದು ಈವರೆಗೂ ಅಕ್ರಮ ಕಟ್ಟಡವನ್ನು ತೆರೆವುಗೊಳಿಸದೆ ಇರುವುದು ಕಂಡುಬಂದಿರುತ್ತದೆ.

(7) ಕಟ್ಟಡ ನಿರ್ಮಿಸುವ ಅವಧಿಗೆ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದು ಒತ್ತುವರಿ ಮಾಡದಂತೆ, 0.07 ಎಕರೆ ಒತ್ತುವರಿಯನ್ನು ತೆರೆವುಗೊಳಿಸುವಂತೆ ಕ್ರಮವಹಿಸದೆ ಇರುವ ಬಗ್ಗೆ ಕಂಡುಬಂದಿದ್ದು 1ನೇ ಎದುರುದಾರರು ತಮ್ಮ ಕರ್ತವ್ಯವನ್ನು ನಿರ್ವಹಿಸದೆ ನಿರ್ಲಕ್ಷ್ಯತೆ ತೋರಿ ಕರ್ತವ್ಯ ಲೋಪವೆಸಗಿರುವುದು ಕಂಡುಬಂದಿರುತ್ತದೆ.

**9.** ಆದ್ದದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಕಟ್ಟಡ ಮಾಲೀಕರು 0.07 ಎಕರೆ ಸ್ಥಳವನ್ನು ಒತ್ತುವರಿ ಮಾಡಿದ್ದು ಈ ಬಗ್ಗೆ ಕಾನೂನು ರೀತ್ಯಾ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

**10.** ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 23/5

[ನ್ಯಾಯಮೂರ್ತಿ ಎನ್. ಆನಂದ]

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ, ಬೆಂಗಳೂರು.**